4. ಶ್ರೀ ಚಿಕ್ಕಣ್ಣ, ನಿರ್ದೇಶಕರು
5. ಶ್ರೀಮತಿ ಹೆಚ್.ಕೆ.ನಾಗವೇಣಿ
6. ಶ್ರೀ ವಿ.ಮುನಿವೀರಪ್ಪ, ನಿರ್ದೇಶಕರು
7. ಶ್ರೀ ಬಿ.ಮುನೇಗೌಡ, ನಿರ್ದೇಶಕರು
8. ಶ್ರೀ ಎಂ.ಬಾಬು, ನಿರ್ದೇಶಕರು
9. ಶ್ರೀ ಎ.ವಿ.ಶಾಮಣ್ಣಗೌಡ, ನಿರ್ದೇಶಕರು
10. ಶ್ರೀ ಎಲ್.ಗೋಪಾಲಕೃಷ್ಣ, ನಿರ್ದೇಶಕರು
11. ಶ್ರೀ ಎಂ.ವೆಂಕಟಗಿರಿ, ನಿರ್ದೇಶಕರು

ಸರ್ಕಾರದಿಂದ ನಾಮ ನಿರ್ದೇಶನಗೊಂಡವರು

1. ಶ್ರೀ ಬಿ.ರಾಮಚಂದ್ರಯ್ಯ, ಉಪಧ್ಯಕ್ಷರು
2. ಶ್ರೀ ಡಿ.ಮರಿಗೌಡ, ನಿರ್ದೇಶಕರು
3. ಶ್ರೀಮತಿ ಮಂಜುಳಗೋವಿಂದ, ನಿರ್ದೇಶಕರು
4. ಶ್ರೀ ಎಂ.ಜಯಕುಮಾರ್, ನಿರ್ದೇಶಕರು
5. ಶ್ರೀ ಜಿ.ಆರ್.ಶ್ರೀನಿವಾಸ್, ನಿರ್ದೇಶಕರು

ಸರ್ಕಾರಿ ಅಧಿಕಾರಿಗಳು

1. ತೋಟಗಾರಿಕೆ ಇಲಾಖೆ ನಿರ್ದೇಶಕರು
2. ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು
3. ವ್ಯವಸ್ಥಾಪಕ ನಿರ್ದೇಶಕರು, ಹಾಪ್‌ಕಾಮ್ಸ್
4. ವಿಶೇಷಾಧಿಕಾರಿ, ದ್ರಾಕ್ಷಿ ಅಭಿವೃದ್ಧಿ ಯೋಜನೆ, ತೋಟಗಾರಿಕೆ ಇಲಾಖೆ.

ಹಿರೇಕೆರೂರು ತಾಲ್ಲೂಕಿನ ಶ್ರೀ ಬಸವೇಶ್ವರ ಸಕ್ಕರೆ ಕಾರ್ಖಾನೆ ಕುರಿತು

1395 (1691) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿರುವ ಶ್ರೀ ಬಸವೇಶ್ವರ ಸಕ್ಕರೆ ಕಾರ್ಖಾನೆಯ ಎ.ಬಿ.ಸಿ.ಡಿ.ಇ. ವರ್ಗದ ಸದಸ್ಯರ ಸಂಖ್ಯೆ ಎಷ್ಟು;

ಆ) ಸದಸ್ಯರಾಗದವರು ಅವರವರ ಅಮಾನತ್ ಹಣವನ್ನು ಕೆಸಿಸಿ ಬ್ಯಾಂಕಿನ ಸಾಲದ ಖಾತೆಗೆ ಕಟ್ಟಲು ಎಷ್ಟು ಜನರು ಅರ್ಜಿ ಕೊಟ್ಟಿದ್ದಾರೆ;

ಇ) ಸದಸ್ಯರಾದವರು ಎಷ್ಟು ಜನರು ಸದಸ್ಯತ್ವಕ್ಕೆ ರಾಜೀನಾಮೆ ಪತ್ರ ಕಳುಹಿಸಿ ಅವರವರ ಖಾತೆಯ ಷೇರು ಹಣವನ್ನು ಕೆಸಿಸಿ ಬ್ಯಾಂಕ್ ಸಾಲದ ಖಾತೆಗೆ ಕಟ್ಟಲು ವಿನಂತಿಸಿಕೊಂಡಿರುತ್ತಾರೆ;

ಈ) ಕಾರ್ಖಾನೆಯ ವ್ಯಾಪ್ತಿಗೆ ಬರುವ ತಾಲ್ಲೂಕುಗಳು ಯಾವುವು ಹಾಗೂ ಈ ತಾಲ್ಲೂಕುಗಳಲ್ಲಿ 31.3.2002ಕ್ಕೆ ಸದಸ್ಯರಾದವರ ಸಂಖ್ಯೆ ಎಷ್ಟು;

ಉ) ಈ ಕಾರ್ಖಾನೆ ವಾರ್ಷಿಕವಾಗಿ ನಡೆದ ಸಾಧಾರಣ ಸಭೆ ಎಷ್ಟು, ಎಷ್ಟು ವರ್ಷಗಳ ಬಾಬ್ತು ಕರೆದಿರುವುದಿಲ್ಲ ಏಕೆ;

ಶ್ರೀ ಹೆಚ್. ವಿಶ್ವನಾಥ್ (ಸಹಕಾರಿ ಸಚಿವರು):

ಅ) ಎ. ವರ್ಗ 9538
ಬಿ. ವರ್ಗ 50
ಸಿ. ವರ್ಗ -
ಡಿ. ವರ್ಗ 43
ಇ. ವರ್ಗ -
ಒಟ್ಟು 9631

ಆ) 314

ಇ) 213

ಈ) ಹಾವೇರಿ ಜಿಲ್ಲೆಯ ಹಿರೇಕೆರೂರು, ರಾಣೆಬೆನ್ನೂರು, ಬ್ಯಾಡಗಿ ಹಾಗೂ ಹಾವೇರಿ (5 ಗ್ರಾಮಗಳು) ತಾಲ್ಲೂಕುಗಳು ಮತ್ತು ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕು.

ಒಟ್ಟು ಸದಸ್ಯರು 9613

ಉ) ಕಾರ್ಖಾನೆ ಐದು ವಾರ್ಷಿಕ ಸರ್ವ ಸದಸ್ಯರ ಸಭೆಗಳನ್ನು ನಡೆಸಿರುತ್ತಿದೆ. 2000-01ನೇ ವಾರ್ಷಿಕ ಮಹಾ ಸಭೆಯನ್ನು ದಿನಾಂಕ 30-9-2001ರೊಳಗೆ ನಡೆಸಬೇಕಾಗಿದ್ದು, ಬರಗಾಲ ಪರಿಸ್ಥಿತಿ ಕಾರಣ ಹಾಗೂ ಸ್ಥಾಪನೆ ಕೆಲಸ ಆರಂಭದ ಹಂತದಲ್ಲಿದ್ದು ಮಿತವ್ಯಯ ದೃಷ್ಟಿಯಿಂದ ಸೆಪ್ಟೆಂಬರ್ 2002ರೊಳಗೆ ನಡೆಸಲು ಅನುಮತಿ ನೀಡಲಾಗಿದೆ.

ಬಾಪೂಜಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ

1396 (1770) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬಾಪೂಜಿ ಕೋಆಪಕೇಟಿವ್ ಹೌಸಿಂಗ್ ಸೊಸೈಟಿ ಲಿ, ಜಾಪೂಜಿನಗರ, ಮೈಸೂರು ರಸ್ತೆ, ಬೆಂಗಳೂರು, ಈ ಸೊಸೈಟಿಯು ಚಂದ್ರಾಲೇಔಟ್‌ನಲ್ಲಿ ಜಮೀನನ್ನು ಖರೀದಿಸಿ ಮನೆ ನಿವೇಶನಗಳನ್ನು ರಚಿಸಿ, 1982-83 ರಿಂದ ಸೊಸೈಟಿಯ ಆದೇಶದಂತೆ ಕಾಲಕಾಲಕ್ಕೆ ಸರಿಯಾಗಿ ಹಣ ಪಾವತಿ ಮಾಡಿದ, ತನ್ನ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚುತ್ತಿದೆಯೇ?

2) ಸದರಿ ಸೊಸೈಟಿಯವರು ಎಷ್ಟು ಎಕರೆ ಪ್ರದೇಶದಲ್ಲಿ ನಿವೇಶನಗಳನ್ನು ರಚಿಸಿದ್ದಾರೆ, ಈವರೆಗೆ ತನ್ನ ಎಷ್ಟು ಜನ ಸದಸ್ಯರಿಗೆ ನಿವೇಶನಗಳನ್ನು ಹಂಚಿದ್ದಾರೆ.

3) ಈ ಹೌಸಿಂಗ್ ಸೊಸೈಟಿಯಲ್ಲಿ ಸಹಕಾರ ಸಂಘಗಳ ಕಾಯ್ದೆಯನ್ನು ಹಾಗೂ ಕಾನೂನುಗಳನ್ನು ಉಲ್ಲಂಘಿಸಿ ಹೊರಗಿನವರಿಗೆ ಹೆಚ್ಚಿನ ಹಣ್ಣಕ್ಕೆ ನಿವೇಶನಗಳನ್ನು ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಬಂದಿದ್ದರೆ, ಅರ್ಹರಿಲ್ಲದ ಸದಸ್ಯರುಗಳಿಗೆ ಅಕ್ರಮವಾಗಿ ನೀಡಿರುವ ನಿವೇಶನಗಳ ನೋಂದಣಿಯನ್ನು ರದ್ದುಗೊಳಿಸಿ ಅರ್ಹ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?